SEPTEMBER 06, 2025

AKASHAVANI - DHARWAD

PRADESH SAMACHARA (KANNADA) 7.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ರಾಜ್ಯ ಸರ್ಕಾರದಿಂದ, ಆದ್ಯತೆಯ ಶಿಕ್ಷಣ ಕ್ಷೇತ್ರಕ್ಕೆ, ವಾರ್ಷಿಕ 65 ಸಾವಿರ ಕೋಟಿ ರೂಪಾಯಿ ಮೀಸಲು.
- ಸರಕು ಮತ್ತು ಸೇವಾ ತೆರಿಗೆ, ಪರಿಷ್ಕರಣೆ; ಕೇಂದ್ರ ಜಿ.ಎಸ್.ಟಿ. ಮಂಡಳಿ ನಿರ್ಧಾರ, ಸ್ವಾಗತಿಸಿದ, ಆರ್ಥಿಕ ತಜ್ಞರು.
- ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಜಯಪುರದ ಆಲಮಟ್ಟಿಯ, ಲಾಲ ಬಹಾದ್ದೂರ ಶಾಸ್ತ್ರಿ ಜಲಾಶಯಕ್ಕೆ, ಬಾಗಿನ ಅರ್ಪಣೆ.
- ಸಾರ್ವಜನಿಕರ, ಕುಂದು ಕೊರತೆ ಹಾಗೂ ಅಹವಾಲು ದಾಖಲಿಸಲು, ರಾಜ್ಯ ಸರ್ಕಾರದಿಂದ, ದೂರು ನಿವಾರಣಾ ತಂತ್ರಾಂಶ, ಜಾರಿಗೆ.

<><><>

ಈಗ ವಾರ್ತೆಗಳ ವಿವರ

<><><>

ಆದರ್ಶ ಶಿಕ್ಷಕ, ಶ್ರೇಷ್ಠ ತತ್ವಜ್ಞಾನಿ, ಶಿಕ್ಷಣ ತಜ್ಞ, ಭಾರತ ರತ್ನ ಹಾಗೂ ಮಾಜಿ ರಾಷ್ಟ್ರಪತಿ ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನವನ್ನು, ರಾಷ್ಟ್ರೀಯ ಶಿಕ್ಷಕರ ದಿನವನ್ನಾಗಿ ಆಚರಿಸಿ, ಅತ್ಯುತ್ತಮ ಹಾಗೂ ಮಾದರಿ ಶಿಕ್ಷಕರಿಗೆ, ಪ್ರಶಸ್ತಿ ನೀಡಿ, ನಾಡಿನಾದ್ಯಂತ ಪುರಸ್ಕರಿಸಿದ ವರದಿಗಳು ಬಂದಿವೆ.

<><><>

ಹೊಸ ದಿಲ್ಲಿಯ ವಿಜ್ಞಾನ ಭವನದಲ್ಲಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಕರ್ನಾಟಕ ಮೂವರು ಶಿಕ್ಷಕರು ಸೇರಿದಂತೆ, ದೇಶದ ಒಟ್ಟು 45 ಆದರ್ಶ ಶಿಕ್ಷಕರಿಗೆ, ರಾಷ್ಟ್ರೀಯ ಅತ್ಯುತ್ತಮ ಶಿಕ್ಷಕ ಪುರಸ್ಕಾರ ನೀಡಿ, ಗೌರವಿಸಿದರು. ರಾಷ್ಟ್ರೀಯ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ, ಉಡುಪಿ ಜಿಲ್ಲೆ, ಮಣಿಪಾಲ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ, ಗಣಿತ ವಿಷಯದ ಸಹ ಪ್ರಾಧ್ಯಾಪಕಿ, ಎಂ.ಇ.ಶೋಭಾ, ಪ್ರದೇಶ ಸಮಾಚಾರಕ್ಕಾಗಿ, ಹೊಸ ದಿಲ್ಲಿಯಿಂದ, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಎಂ.ಇ.ಶೋಭಾ ಧ್ವನಿ 44 ಸೆಕೆಂದುಗಳು

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಮಂಜುನಾಥ ನಗರದ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಹುಚ್ಚಪ್ಪ ಕೋರವರ, ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ತಾಲೂಕು, ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಎಸ್.ಜಿ. ಮಡಿವಾಳಮ್ಮ, ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕು, ಗುಂಡಕಲಮುರಿ ತೋಟದ, ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯ, ಆಂಗ್ಲ ಭಾಷಾ ಸಹ ಶಿಕ್ಷಕ ಬಸವರಾಜ ಕಲ್ಲೋಳಿ ಸೇರಿದಂತೆ, ಒಟ್ಟು 31 ಜನ ಅತ್ಯುತ್ತಮ ಶಿಕ್ಷಕರಿಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಮಾದರಿ ಶಿಕ್ಷಕ ಪ್ರಶಸ್ತಿಗಳನ್ನು, ಪ್ರದಾನಿಸಿ, ಗೌರವಿಸಿದರು. ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ ಜರುಗಿದ, ರಾಜ್ಯದ ಮಾದರಿ ಶಿಕ್ಷಕರ ದಿನಾಚರಣೆಯಲ್ಲಿ ಪಾಲ್ಗೊಂಡು, ಮಾತನಾಡಿದ ಮುಖ್ಯಮಂತ್ರಿಯವರು, ರಾಜ್ಯ ಸರ್ಕಾರ, ಪ್ರತಿ ವರ್ಷ 65 ಸಾವಿರ ಕೋಟಿ ರೂಪಾಯಿ ಹಣವನ್ನು, ಆದ್ಯತೆಯ ಶಿಕ್ಷಣ ಕ್ಷೇತ್ರಕ್ಕೆ ಮೀಸಲಿರಿಸಿ, ಯೋಜನಾ ಬದ್ಧವಾಗಿ ಖರ್ಚುಸುತ್ತಿದೆ ಎಂದರು. ಶಾಲಾ ಶಿಕ್ಷಣ ಖಾತೆ ಸಚಿವ, ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ ಸುಧಾಕರ ಪಾಲ್ಗೊಂಡಿದ್ದರು.

<><><>

ಉನ್ನತ ಶಿಕ್ಷಣದಿಂದ ವಂಚಿತರಾದ, ಸರ್ಕಾರಿ ಶಾಲೆಯಲ್ಲಿ, 10ನೇ ತರಗತಿ ಹಾಗೂ ಪಿ.ಯು.ಸಿ. ವ್ಯಾಸಂಗ ಮಾಡಿರುವ, 36 ಸಾವಿರ ಹೆಣ್ಣುಮಕ್ಕಳಿಗೆ, ಯಾವುದೇ ಕೈಗಾರಿಕಾ ತರಬೇತಿ ಕೇಂದ್ರ – ಐ.ಟಿ.ಐ. ಅಥವಾ ಪದವಿ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ, ಪ್ರತಿ ವರ್ಷ, 30 ಸಾವಿರ ರೂಪಾಯಿ ಶಿಷ್ಯವೇತನ, ಅಜೀಂ ಪ್ರೇಮ್ ಜಿ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ, ರಾಜ್ಯ ಸರ್ಕಾರ ನೀಡಲಿದೆ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ ಸುಧಾಕರ ಪ್ರಕಟಿಸಿದ್ದಾರೆ. ಬೆಂಗಳೂರಿನ ವಿಧಾನಸೌಧದ, ಸಮ್ಮೇಳನ ಸಭಾಂಗಣದಲ್ಲಿ ಜರುಗಿದ, ರಾಜ್ಯದ ಮಾದರಿ ಶಿಕ್ಷಕರ ದಿನಾಚರಣೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲಾಭಿವೃದ್ಧಿ ನಿಗಮದ ವತಿಯಿಂದ, 2026 ನೇ ಸಾಲಿನಲ್ಲಿ, ಚೀನಾದ ಶಾಂಘೈನಲ್ಲಿ ನಡೆಯುವ, ವಿಶ್ವ ಕೌಶಲ ಸ್ಪರ್ಧೆಗೆ, ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ, ರಾಜ್ಯ ಕೌಶಲ ಒಲಿಂಪಿಕ್ಸ್ ಸ್ಪರ್ಧಾ ಕಾರ್ಯಕ್ರಮವನ್ನು, 63 ಪ್ರಕಾರದ ಕೌಶಲ ವಿಭಾಗಗಳಲ್ಲಿ ಆಯೋಜಿಸುತ್ತಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು, www.skillindiadigital.gov.in ಜಾಲತಾಣದಲ್ಲಿ, ಉಚಿತವಾಗಿ ಹೆಸರು ನೋಂದಾಯಿಸಬಹುದು. ಈ ತಿಂಗಳ 30 ಕೊನೆಯ ದಿನ ಎಂದು, ದಕ್ಷಿಣಕನ್ನಡ ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ, ತಿಳಿಸಿದ್ದಾರೆ.

<><><>

ವಿಜಯಪುರ ಜಿಲ್ಲೆ, ಆಲಮಟ್ಟಿಯ, ಲಾಲಬಹಾದ್ದೂರ ಶಾಸ್ತ್ರೀ ಜಲಸಂಗ್ರಾಹಾಗಾರ ಭರ್ತಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇಂದು ಬೆಳಗ್ಗೆ 11 ಗಂಟೆಗೆ ಬಾಗಿನ ಅರ್ಪಿಸಲಿದ್ದಾರೆ. ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ, ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ ಸೇರಿದಂತೆ, ಅನೇಕ ಗಣ್ಯರು, ಗಂಗಾ ಪೂಜೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು, ಮಾರ್ಕೋನಹಳ್ಳಿ ಹಾಗೂ ಮಂಗಳಾ ಜಲಾಶಯಗಳು ಭರ್ತಿಯಾಗುವ ಹಂತ ತಲುಪಿವೆ. ಹೇಮಾವತಿ ನದಿ ಪಾತ್ರದ ಜನ, ಮುನ್ನೆಚ್ಚರಿಕೆ ವಹಿಸುವಂತೆ, ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ, ಹೇಮಾವತಿ ನಾಲಾ ಉಪವಿಭಾಗದ ಅಭಿಯಂತರರು ಕೋರಿದ್ದಾರೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಸರಕು ಮತ್ತು ಸೇವಾ ತೆರಿಗೆ – ಜಿ.ಎಸ್.ಟಿ., ಎರಡನೇ ಆವೃತ್ತಿಯ, ಪರಿಷ್ಕರಣೆಯ, ಕೇಂದ್ರ ಜಿ.ಎಸ್.ಟಿ. ಮಂಡಳಿ ಮಂಡಳಿ ನಿರ್ಧಾರ, ಸ್ವಾಗತಾರ್ಹ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ತೆರಿಗೆ ಪಾವತಿಸುವ ಜನತೆ ಹಾಗೂ ವ್ಯಾಪಾರಿ ವರ್ಗದ ಮೇಲಿನ ಆರ್ಥಿಕ ಭಾರ ಹಾಗೂ ಅನುಷ್ಟಾನದ ಜಂಜಾಟವನ್ನು ತಗ್ಗಿಸಲು, ಜಿ.ಎಸ್.ಟಿ. ತೆರಿಗೆ ಸುಧಾರಣೆ, ಅಗತ್ಯವಾಗಿತ್ತು ಎಂದು, ರಾಜ್ಯದ ಅರ್ಥ ಸಚಿವರೂ ಆಗಿರುವ, ಸಿದ್ದರಾಮಯ್ಯ ಅಭಿಪ್ರಾಯ ಪಟ್ಟಿದ್ದಾರೆ. ಪ್ರಸ್ತುತ ಜಿ.ಎಸ್.ಟಿ. ಸುಧಾರಣೆ ಯೋಜನೆಯಿಂದ, ಕರ್ನಾಟಕ ರಾಜ್ಯ, ವಾರ್ಷಿಕ 15 ಸಾವಿರದಿಂದ, 20 ಸಾವಿರ ಕೋಟಿಯ ಷ್ಟು, ಕರ ಆದಾಯ ಕಳೆದುಕೊಳ್ಳಲಿದೆ. ಆದರೆ, ರಾಜ್ಯದ ಜನರ ಹಿತದೃಷ್ಟಿಯಿಂದ, ಜಿ.ಎಸ್.ಟಿ. ಸುಧಾರಣೆಯ ಕೇಂದ್ರದ ನಿರ್ಧಾರವನ್ನು, ತಾವು ಸ್ವಾಗತಿಸುವುದಾಗಿ, ಮುಖ್ಯಮಂತ್ರಿ ಸ್ಪಷ್ಟ ಪಡಿಸಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆ, ಶಿರಸಿಯಲ್ಲಿ ಮಾತನಾಡಿದ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ, ಸಾಮಾನ್ಯ ಜನರ ಜೀವನವನ್ನು ಸುಲಭ, ಹಾಗೂ ಆತ್ಮನಿರ್ಭರ ಭಾರತವನ್ನು ಬಲಪಡಿಸುವ, ಪರಿವರ್ತನಾತ್ಮಕ ಹೆಜ್ಜೆ ಎಂದು ಬಣ್ಣಿಸಿದ್ದಾರೆ.

<><><>

ರೇಲ್ವೆ ಖಾತೆ ರಾಜ್ಯ ಸಚಿವ, ವಿ. ಸೋಮಣ್ಣ ಚಿಕ್ಕಬಳ್ಳಾಪುರದಲ್ಲಿ ಮಾತನಾಡಿ, ಬಡವರು, ಮಧ್ಯಮ ವರ್ಗದ ಜನರ, ಆರ್ಥಿಕ ಸ್ವಾವಲಂಬನೆ ಸಾಧಿಸಲು, ಕೇಂದ್ರ ಜಿ.ಎಸ್.ಟಿ. ಮಂಡಳಿ, ತೆರಿಗೆ ಸುಧಾರಣೆ ಕ್ರಮಗಳನ್ನು ಪ್ರಕಟಿಸಿದೆ, ಎಂದರು.

<><><>

ಸರಕು ಮತ್ತು ಸೇವಾ ತೆರಿಗೆ, ಜಿ.ಎಸ್.ಟಿ. ಪರಿ ್ಕರಣೆಯಿಂದ, ಆರೋಗ್ಯ, ಕೃಷಿ, ಶಿಕ್ಷಣ ಕ್ಷೇತ್ರಗಳಿಗೆ ಹಲವು ಅನುಕೂಲಗಳಾಗಲಿವೆ ಎಂದು, ಆರ್ಥಿಕ ತಜ್ಞರು, ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜಿ.ಎಸ್.ಟಿ. ಸಮಿತಿ 56ನೇ ಸಭೆ, ಕರ ಪರಿಷ್ಕರಣೆ ನಿರ್ಧಾರವನ್ನು ಸ್ವಾಗತಿಸಿದ್ದಾರೆ, ವಿಜಯನಗರ ಜಿಲ್ಲೆ, ವಾಣಿಜ್ಯೋದ್ಯಮ ಸಂಸ್ಥೆ, ಅಧ್ಯಕ್ಷ ಅಶ್ವಿನ ಕೋತಂಬರಿ..

<><><>

ಅಶ್ವಿನ ಕೋತಂಬರಿ ಧ್ವನಿ 39 ಸೆಕೆಂದುಗಳು

<><><>

ಕುಂದು ಕೊರತೆ ಹಾಗೂ ಅಹವಾಲು ದಾಖಲಿಸಲು, ರಾಜ್ಯ ಸರ್ಕಾರ, ಏಕೀಕೃತ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ, (Integrated Public Grievance Redressal System) ವ್ಯವಸ್ಥೆ, ಜಾರಿಗೊಳಿಸಿದೆ.

<><><>

ಹಾಸನ ಜಿಲ್ಲಾ ಉಸ್ತುವಾರಿ ಸಚಿವ, ಕೃ ್ಣ ಬೈರೇಗೌಡ, ಹಾಸನಾಂಬಾ ಕಲಾ ಕ್ಷೇತ್ರದಲ್ಲಿ, ಇಂದು ಬೆಳಗ್ಗೆ 10.30ಕ್ಕೆ ಜನಸ್ಪಂದನ ಕಾರ್ಯಕ್ರಮ ನಡೆಸಲಿದ್ದಾರೆ. ಕಂದಾಯ ಇಲಾಖೆ ಹಾಗೂ ಹಾಸನ ಜಿಲ್ಲೆಯ, ಸಾರ್ವಜನಿಕ ಕುಂದು ಕೊರತೆ ಆಲಿಸಲಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ರಾಜ್ಯ ಸರ್ಕಾರದಿಂದ, ಆದ್ಯತೆಯ ಶಿಕ್ಷಣ ಕ್ಷೇತ್ರಕ್ಕೆ, ವಾರ್ಷಿಕ 65 ಸಾವಿರ ಕೋಟಿ ರೂಪಾಯಿ ಮೀಸಲು.
- ಸರಕು ಮತ್ತು ಸೇವಾ ತೆರಿಗೆ, ಪರಿಷ್ಕರಣೆ; ಕೇಂದ್ರ ಜಿ.ಎಸ್.ಟಿ. ಮಂಡಳಿ ನಿರ್ಧಾರ, ಸ್ವಾಗತಿಸಿದ, ಆರ್ಥಿಕ ತಜ್ಞರು.
- ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಜಯಪುರದ ಆಲಮಟ್ಟಿಯ, ಲಾಲ ಬಹಾದ್ದೂರ ಶಾಸ್ತ್ರಿ ಜಲಾಶಯಕ್ಕೆ, ಬಾಗಿನ ಅರ್ಪಣೆ.

- ಸಾರ್ವಜನಿಕರ, ಕುಂದು ಕೊರತೆ ಹಾಗೂ ಅಹವಾಲು ದಾಖಲಿಸಲು, ರಾಜ್ಯ ಸರ್ಕಾರದಿಂದ, ದೂರು ನಿವಾರಣಾ ತಂತ್ರಾಂಶ, ಜಾರಿಗೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>